**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 03-09-2022 ರಂದು ಹೊಸ ವಾರ್ಡ್ ಸಂಖ್ಯೆ:104 (ಕಾಡುಗುಡಿ)ರ ವಾರ್ಡ್ ಕಮಿಟಿ ಸಭೆಯನ್ನು ಹೋಟೇಲ್ ಶ್ರೀನಿಧಿ, ಹೋಫ್ ಫಾರಂ ವೃತ್ತ ಇಲ್ಲಿ ಶ್ರೀ.ಶ್ರೀನಿಧಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

- ಶ್ರೀ.ಶ್ರೀನಿಧಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
- ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು.
- ಶ್ರೀಮತಿ.ಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ, ಕಾಡುಗುಡಿ ವಾರ್ಡ್ ನಂ.104
- ಶ್ರೀ.ಸಂಧೀಪ್ ಕುಮಾರ್.ಎಲ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ
- ಶ್ರೀ.ಶಿವರಾಜ್, ಎ.ಎಸ್.ಐ, ಕಾಡುಗುಡಿ ಪೊಲೀಸ್ ಠಾಣೆ
- ಶ್ರೀ.ಇಸ್ರೇಲ್, ಟಿ.ಐ, ಕಂದಾಯ ಶಾಖೆ, ಬಿಬಿಎಂಪಿ
- ಶ್ರೀ.ವಿ.ರವಿಚಂದ್ರ, ಎ.ಇ,
- ಸಹಾಯಕ ಸಬ್ಇನ್ಸ್‌ಪೆಕ್ಟರ್, ವೈಟ್‌ಫೀಲ್ಡ್
- ಶ್ರೀ.ವೆಂಕಟೇಶ್.ಕೆ.ಆರ್, ವಾರ್ಡ್ ಮಾರ್ಷಲ್

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

1. ರೋಮ
2. ಹೆಚ್.ಎಲ್.ವೆಂಕಟೇಶ್
3. ಪಾರ್ಥಸಾರತಿ
4. ಮುನೀಂದ್ರ.ಪಿ
5. ಭಾಗ್ಯ
6. ಸುಮನ್ ಸೇನಾಪತಿ
7. ರವಿಕಾಂತ್.ವಿ
8. ನಾನಿ.ಬಿ
9. ಎಂ.ಸಂಪಂಗಿ

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು-ಬಿಬಿಎಂಪಿ, ಹಿರಿಯ ಆರೋಗ್ಯ ನಿರೀಕ್ಷಕರು, ಎ.ಇ.-ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.
2. ಸಭೆಯಲ್ಲಿ ಸುಮನ್.ಎಸ್ ರವರು Govt.Polytechnic college ಎದುರು ಕಸದ ರಾಶಿ ತುಂಬಿದ್ದು, ಕೂಡಲೇ ತೆರವುಗೊಳಿಸಬೇಕೆಂದು ಕೋರಿದರು.
    - ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಅಧಿಕಾರಿ ಲಕ್ಷ್ಮಿ ರವರಿಗೆ ಕೂಡಲೇ ತೆರವುಗೊಳಿಸಲು ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ವೋಟರ್ ಐ.ಡಿ. ಕಾರ್ಡ್ ಪಡೆಯಲು ವಿಳಂಭವಾಗುತ್ತಿರುವುದಾಗಿ ಕೋರಿದರು

- ➢ ಸದರಿ ವಿಷಯಕ್ಕೆ ಶ್ರೀ.ಇಸ್ರೇಲ್, ಟಿ.ಐ ರವರು ಪ್ರಸ್ತುತ ವೋಟರ್ ಐಡಿ ಕಾರ್ಡ್ ಪಡೆಯಲು ಆರ್‌ಲೈನ್‌ನಲ್ಲಿ ನಮೂದಿಸಬೇಕಾಗಿರುತ್ತದೆ ಮತ್ತು ವೋಟರ್ ಐ.ಡಿ. ಕಾರ್ಡ್‌ನ್ನು ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಮಾಡಬೇಕಾಗಿರುವುದರಿಂದ ಸಾರ್ವಜನಿಕರು ಕಂದಾಯ ಇಲಾಖೆಗೆ ಬಂದು ಲಿಂಕ್ ಮಾಡಿಕೊಳ್ಳಲು ತಿಳಿಸಿದರು.

4. ಸಭೆಯಲ್ಲಿ ಸಾರ್ವಜನಿಕರು ಈಗಾಗಲೇ ವಾರ್ಡ್ ವಿಭಾಗವಾಗಿರುವುದರಿಂದ ಹಳೇಯ ವಾರ್ಡ್‌ನಂತೆ ವೋಟರ್ ಐ.ಡಿ. ಕಾರ್ಡ್‌ನ್ನು ಯಾವ ಕಛೇರಿಯಲ್ಲಿ ನಮೂದಿಸಬೇಕೆಂದು ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ಇಸ್ರೇಲ್, ಟಿ.ಐ ರವರು ಪ್ರಸ್ತುತ ವಾರ್ಡ್ ವಿಂಗಡನೆ ಕಾರ್ಯವು ಪ್ರಗತಿಯಲ್ಲಿ ಇರುವುದರಿಂದ ಹಳೇ ವಾರ್ಡ್‌ಗೆ ಸಂಬಂಧಿಸಿದಂತೆ ವಾರ್ಡ್ ನಂ.83ರಂತೆ ನಮೂದಿಸಿಕೊಳ್ಳಬೇಕೆಂದು ತಿಳಿಸಿದರು.

5. ಸಭೆಯಲ್ಲಿ ಶ್ರೀ.ಮುನೀಂದ್ರ, ದಿನ್ನೂರು ರವರು ಬಿ.ಬಡ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರು ದಿನ್ನೂರು ಮುಖ್ಯರಸ್ತೆಯಲ್ಲಿ ಅಗೆದಿರುವ ರಸ್ತೆಯನ್ನು ಕೂಡಲೇ ರೆಸ್ಟೋರೇಷನ್ ಮಾಡಿಕೊಡಬೇಕೆಂದು ಕೋರಿದರು..

- ➢ ಸದರಿ ವಿಷಯಕ್ಕೆ ಶ್ರೀ.ರವಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರು ಈ ರಸ್ತೆಯು 110 ಹಳ್ಳಿಗಳ ಶಾಖೆಗೆ ಬರುವುದರಿಂದ ಸದರಿ ಅಭಿಯಂತರರಿಗೆ ತಿಳಿಸುವುದಾಗಿ ತಿಳಿಸಿದರು.

6. ಸಭೆಯಲ್ಲಿ ಮೇಡಂ ರೋಮ ರವರು, ಚೆನ್ನಸಂದ್ರ, ಮುಖ್ಯರಸ್ತೆಯಲ್ಲಿ ಮಣ್ಣಿನ ರಾಶಿ ಇದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಸದರಿ ಮಣ್ಣನ್ನು ತೆರವುಗೊಳಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ ರವರು ಮಣ್ಣಿನ ರಾಶಿಯನ್ನು ಎಸ್.ಡಬ್ಲ್ಯೂ.ಡಿ. ಬಿಬಿಎಂಪಿ ವತಿಯಿಂದ ಸದರಿ ಸ್ಥಳದಲ್ಲಿ ಸುರಿದಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು. ಆ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ. ಅಭಿಯಂತರರಿಗೆ ತಿಳಿಸಲು ಸೂಚಿಸಿದರು.

7. ಸಭೆಯಲ್ಲಿ ಶ್ರೀ.ಮುನಿಂದ್ರ ರವರು ದಿನ್ನೂರು ಮುಖ್ಯರಸ್ತೆಯಲ್ಲಿ ರಸ್ತೆ ಅಗೆತದ ಭಾಗಕ್ಕೆ ವೆಟ್ ಮಿಕ್ಸ್‌ನ್ನು ಬಿಬಿಎಂಪಿ-ಮೇಜರ್ ರೋಡ್ಸ್ ಕಡೆಯಿಂದ ಹಾಕಿದ್ದು, ಆ ಭಾಗಕ್ಕೆ ಡಾಂಬರನ್ನು ಕೂಡಲೇ ಹಾಕಬೇಕೆಂದು ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ ರವರು ಪ್ರಸ್ತುತ ಮಳೆಯು ಸುರಿಯುತ್ತಿದ್ದು, ತದನಂತರ ಹಾಕುವುದಾಗಿ ತಿಳಿಸಿದರು.

8. ಸಭೆಯಲ್ಲಿ ಶ್ರೀ.ಮುನಿಂದ್ರ ದಿನ್ನೂರು ರವರು ದಿನ್ನೂರು ವ್ಯಾಪ್ತಿಯಲ್ಲಿ ವಿದ್ಯತುಚ್ಛಕ್ತಿ ಬೀದಿ ದೀಪಗಳನ್ನ ಎಲ್ಲಾ ಕಂಬಗಳಿಗೆ ಅಳವಡಿಸಬೇಕೆಂದು ಕೋರಿದರು.

- ➢ ಸದರಿ ವಿಷಯಕ್ಕೆ ಶ್ರೀ.ಶರಥ್, ಸ.ಕಾ.ಅ ವಿದ್ಯುತ್ ಶಾಖೆ, ಬಿಬಿಎಂಪಿ, ರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದಾಗ ಎಲ್ಲಾ ಕಂಬಗಳಿಗೆ ವಿದ್ಯತುಚ್ಛಕ್ತಿ ಬೀದಿ ದೀಪಗಳನ್ನ ಅಳವಡಿಸಲಾಗುವುದು ಎಂದು ತಿಳಿಸಿದರು.

9. ಸಭೆಯಲ್ಲಿ ಶ್ರೀ.ಮುನಿಂದ್ರ, ದಿನ್ನೂರು ರವರು ದಿನ್ನೂರು ಭಾಗದ ಕಾಮಗಾರಿಗಳನ್ನ ಮಳೆ ನಿಂತ ಸಮಯದಿಂದ ಒಂದು ತಿಂಗಳಲ್ಲಿ ಪೂರ್ಣಗೊಳಿಸಬೇಕೆಂದು ಕೋರಿದರು.
    - ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ಪ್ರಸ್ತುತ ಮಳೆಯು ಬೀಳುತ್ತಿದ್ದು, ನಿಂತ ಮೇಲೆ ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸುವುದಾಗಿ ತಿಳಿಸಿದರು.

10. ಸಭೆಯಲ್ಲಿ ಶ್ರೀ.ಸುಮನ್, ರವರು ಎಫ್.ಸಿ.ಐ ಗೋಡೌನ್ ರಸ್ತೆಯಲ್ಲಿ ಚಿಕನ್ ಮತ್ತು ಮಟನ್ ವೆಸ್ಟೇಜ್‌ಗಳನ್ನು ರಸ್ತೆಯಲ್ಲಿ ಸುರಿಯುತ್ತಿರುವುದು ಕಂಡುಬರುತ್ತಿದ್ದು, ಸದರಿಯವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು.
    - ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಶ್ರೀ.ಸಂಧೀಪ್ ಕುಮಾರ್.ಎಲ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ ರವರಿಗೆ Animal Husbandry ವಿಭಾಗ, ಬಿಬಿಎಂಪಿ ರವರಿಗೆ ವಿಷಯವನ್ನು ತಿಳಿಸಬೇಕೆಂದು ಸೂಚಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

3/9/2022

**(ಎನ್.ವೆಂಕಟೇಶ್)**
**ಸಹಾಯಕ ಅಭಿಯಂತರರು**
**ವಾರ್ಡ್ ನಂ: 104 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ